ಶಾಸಕರ ವಿಶೇಷ ಅನುದಾನ

# ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಣೆ

ಪ್ರಜಾವಾಣಿ ವಾರ್ತೆ

ಧಾರವಾಡ: ಶಾಸಕ ಅರವಿಂದ ಬೆಲ್ಲದ ಅವರ ವಿಶೇಷ ಅನುದಾನದಡಿ ಬುಧವಾರ ಪಾಲಿಕೆ ಆವರಣದಲ್ಲಿರುವ ಅವರ ಕಚೇರಿ ಎದುರು 21 ಜನ ಅರ್ಹ ಫಲಾನುಭವಿ ಅಂಗವಿಕಲರಿಗೆ ತ್ರಿಚಕ್ರ ವಾಹನಗಳನ್ನು ವಿತರಿಸಲಾಯಿತು.

ಅಂಗವಿಕಲರು ತಮ್ಮ ವ್ಯಾಪಾರ, ಉದ್ಯೋಗದಲ್ಲಿ ಮುನ್ನಡೆಯುವ ಉದ್ದೇಶದಿಂದ ಅವರಿಗೆ ಈ ದ್ವಿಚಕ್ರ ವಾಹನಗಳನ್ನು ನೀಡಲಾಯಿತು. ಒಂದು ಸ್ಕೂಟರ್‌ಗೆ ₹ 63,900 ವೆಚ್ಚ ತಗುಲಿದ್ದು, ಒಟ್ಟು ₹13,41,900 ವೆಚ್ಚದಲ್ಲಿ 21 ದ್ವಿಚಕ್ರ ವಾಹನಗಳನ್ನು ಖರೀದಿಸಿ ಅರ್ಹರಿಗೆ ಹಸ್ತಾಂತರಿಸಲಾಯಿತು.

ನಂತರ ಮಾತನಾಡಿದ ಶಾಸಕ ಅರವಿಂದ ಬೆಲ್ಲದ, 'ಫಲಾನುಭವಿಗಳು ತಮಗೆ ದೊರೆತ ದ್ವಿಚಕ್ರ ವಾಹನಗಳನ್ನು ತಮ್ಮ ಉದ್ಯೋಗ ಹಾಗೂ ವ್ಯಾಪಾರಕ್ಕಾಗಿ ಬಳಕೆ ಮಾಡಿಕೊಳ್ಳಬೇಕು. ಆ ಮೂಲಕ ತಾವು ಉದ್ಯೋಗದಲ್ಲಿ ಉನ್ನತಿ ಕಂಡುಕೊಳ್ಳಬೇಕು. ಶಾಸಕರ ವಿಶೇಷ ಅನುದಾನದಡಿ ಈ ವಾಹನಗಳನ್ನು ವಿತರಿಸಲಾಗುತ್ತಿದೆ. ಸರ್ಕಾರದ ಇಂಥ ಯೋಜನೆಗಳನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು' ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಅವರು, ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದ ಬಡ ಫಲಾನುಭವಿಗಳಿಗೆ ಸರ್ಕಾರದ ಸಹಾಯ ಧನ ರೂಪದಲ್ಲಿ ಚೆಕ್ ವಿತರಿಸಿದರು.



ಅಂಗವಿಕಲರಿಗೆ ಬುಧವಾರ ಶಾಸಕ ಅರವಿಂದ ಬೆಲ್ಲದ ಅವರು ತಮ್ಮ ವಿಶೇಷ ಅನುದಾನದಡಿ ತ್ರಿಚಕ್ರ ವಾಹನಗಳನ್ನು ವಿತರಿಸಿದರು

**ಮುಖ್ಯಾಂಶಗಳು**

- ಅವಳಿ ನಗರದ ಅರ್ಹ ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಣೆ
- ಪ್ರತಿ ಸ್ಕೂಟರ್‌ಗೆ ₹ 63,900 ವೆಚ್ಚ
- 21 ಜನ ಫಲಾನುಭವಿಗಳು

**'ಕೆಲಸದೊಂದಿಗೆ ಮಕ್ಕಳ ಜವಾಬ್ದಾರಿ ಇರುವುದರಿಂದ ಆಟೋಗಾಗಿಯೇ ₹ 300ಕ್ಕೂ ಹೆಚ್ಚು ಹಣ ಖರ್ಚಾಗುತ್ತಿತ್ತು. ದ್ವಿಚಕ್ರ ವಾಹನ ನೀಡಿರುವುದರಿಂದ ನನಗೆ ಬಹಳ ಅನುಕೂಲವಾಗಿದೆ'**

**– ಅಕ್ಕನಾಗಮ್ಮ ಕೆರೂರ**

ಫಲಾನುಭವಿ, ಆನಂದ ನಗರ, ಹುಬ್ಬಳ್ಳಿ

Hubballi-Dharwad

PV 30/4/15